GOVERNMENT OF KARNATAKA

No:RDP 316 GPK 09

Karnataka Government Secretariat,
M.S. Building,
Bangalore, Dated: 19-11-2009.

## NOTIFICATION

The draft of the following rules further to amend the Karnataka General Service (Development Branch and Local Government Branch) [Recruitment] Rules, 1962, which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) is hereby published as required by clause (a) of sub-section (2) of section 3 of the said Act, for the information of all persons likely to be affected thereby and notice is hereby given that the said draft rules will be taken into consideration after the expiry of fifteen days from the date of its publication in the Official Gazette.

Any objection or suggestion which may be received by the State Government from any person with respect to the said draft rules before the expiry of the period specified above, will be considered by the State Government. Objections and suggestions may be addressed to the Secretary to Government, Rural Development and Panchayat Raj Department, M.S. Building, Dr. B.R. Ambedkar Veedhi, Bangalore-560 001.

## DRAFT RULES

**1. Title and commencement:** (1) These rules may be called the Karnataka General Service (Development Branch and Local Government Branch) [Recruitment] [ 1st Amendment] Rules, 2009.

(2) They shall come into force from the date of publication in the Official Gazette.

**2. Amendment of the Schedule:-** In the Schedule to the Karnataka General Service (Development Branch and Local Government Branch) [Recruitment] Rules, 1962;

all entries relating to the cadre of ``Extension Officers [Panchayath]`` shall stand deleted and in its place the following shall be inserted;

| Sl. No | Category of Post and scale of pay | No. of posts | Method of Recruitment | Minimum Qualification |
|---|---|---|---|---|
| 1 | 2 | 3 | 4 | 5 |
| 1 | Panchayath Development Officer (Rs.10000-18150) | Permanent-5628<br>Temporary------- | 67 percent by Direct recruitment in accordance with the Karnataka General Service (Development Branch and Local Government Branch) Recruitment of Panchayath Development Officers (Special) (Recruitment) Rules, 2009.<br><br>33 percent by<br>i) Merger of the posts of Extension Officers (Panchayath) against promotional quota under Rule 43 of KCSRs as a one time measure, in which case the cadre of Extension Officers (Panchayath) shall stand abolished; and | Must be holder of a Bachelor`s Degree or equivalent of a recognized University established by law. |

| | | | | |
|---|---|---|---|---|
| | | | ii) promotion from the cadre of Grama Panchayat Secretaries and Rural Development Assistant (Grade-1) | Must be holder of a Bachelor`s Degree or equivalent of a recognized University established by law.<br><br>Must have put in a service of not less than five years in the cadre of Grama Panchayat Secretaries and Rural Development Assistant (Grade-1)<br><br>Provided that if persons who have put in a service of not less than five years are not available,<br>persons who have put in a service of not less than three years may be considered. |

By Order and in the name of
Governor of Karnataka,

(Swarnalatha M. Bhandare)
Under Secretary to Government,
Rural Development & Panchayat Raj Department.

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 316 ಗ್ರಾಪಂಕಾ 2008

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 19.11.2009.

**ಅಧಿಸೂಚನೆ**

ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ 3ನೇ ಪ್ರಕರಣದ (1)ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ 3ನೇ ಪ್ರಕರಣದ 2(ಎ) ಉಪ ಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ ಕರ್ನಾಟಕ ಸರ್ಕಾರವು ರೂಪಿಸಲು ಉದ್ದೇಶಿಸಿರುವ ಕರ್ನಾಟಕ ಸಾಮಾನ್ಯ ಸೇವೆ (ಆಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) [ನೇಮಕಾತಿ] (ತಿದ್ದುಪಡಿ) ನಿಯಮಗಳು, 1962 ರ ಕರಡನ್ನು ಈ ಮೂಲಕ ಪ್ರಕಟಿಸಿ ಇದರಿಂದ ಬಾಧಿತರಾಗಬಹುದಾದಂತಹ ಎಲ್ಲಾ ವ್ಯಕ್ತಿಗಳ ಮಾಹಿತಿಗೆ ತರಲಾಗಿದೆ ಮತ್ತು ಸದರಿ ಕರಡು ನಿಯಮಗಳನ್ನು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚನೆ ನೀಡಿದೆ.

ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ, ಮೇಲೆ ನಿಗದಿಪಡಿಸಿದ ಅವಧಿಯು ಮುಕ್ತಾಯಗೊಳ್ಳುವ ಮುನ್ನ ಸರ್ಕಾರದಲ್ಲಿ ಯಾವುದೇ ವ್ಯಕ್ತಿಗಳಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹಮಹಡಿ ಕಟ್ಟಡ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001. ಈ ವಿಳಾಸಕ್ಕೆ ಕಳುಹಿಸಬಹುದಾಗಿದೆ.

**ಕರಡು ನಿಯಮಗಳು**

**1. ಶೀರ್ಷಿಕೆ ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ಸಾಮಾನ್ಯ ಸೇವೆ (ಆಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) [ನೇಮಕಾತಿ] (ಮೊದಲನೇ ತಿದ್ದುಪಡಿ) ನಿಯಮಗಳು, 2009 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಅನುಸೂಚಿಯ ತಿದ್ದುಪಡಿ:–** ಕರ್ನಾಟಕ ಸಾಮಾನ್ಯ ಸೇವೆ (ಆಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 1962 ರ ಅನುಸೂಚಿಯಲ್ಲಿ;

''ವಿಸ್ತರಣಾಧಿಕಾರಿ (ಪಂಚಾಯಿತಿ)'' ವೃಂದಕ್ಕೆ ಸಂಬಂಧಿಸಿದ ಎಲ್ಲಾ ನಮೂದುಗಳನ್ನು ಕೈಬಿಡತಕ್ಕದ್ದು. ಮತ್ತು ಅದರ ಸ್ಥಳದಲ್ಲಿ ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು;

| ಕ್ರಮ ಸಂಖ್ಯೆ | ಹುದ್ದೆಯ ಪ್ರವರ್ಗ ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ಅರ್ಹತೆ |
|---|---|---|---|---|
| 1 | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (10000–18150) | ಶಾಶ್ವತ – 5628 ತಾತ್ಕಾಲಿಕ --- | ಶೇಕಡಾ 67 ರಷ್ಟು ಹುದ್ದೆಗಳು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ (ವಿಶೇಷ) (ನೇಮಕಾತಿ) ನಿಯಮಗಳು, 2009 ರನ್ವಯ ನೇರ ನೇಮಕಾತಿ ಮೂಲಕ.<br><br>ಶೇಕಡಾ 33 ರಷ್ಟು ಹುದ್ದೆಗಳು<br><br>1) ವಿಸ್ತರಣಾಧಿಕಾರಿ (ಪಂಚಾಯಿತಿ) ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 43 ರ ಅನುಸಾರ ಒಂದು ಬಾರಿಯ ಕ್ರಮವಾಗಿ ಬಡ್ತಿ ಕೋಟಾದ ಎದುರಿಗೆ ವಿಲೀನಗೊಳಿಸುವ ಮೂಲಕ, ಅಂತಹ ಸಂದರ್ಭದಲ್ಲಿ ವಿಸ್ತರಣಾಧಿಕಾರಿ (ಪಂಚಾಯಿತಿ) ವೃಂದ ರದ್ದುಗೊಳ್ಳತಕ್ಕದ್ದು; ಮತ್ತು<br><br>2) ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹಾಗೂ ಗ್ರಾಮೀಣ ಅಭಿವೃದ್ಧಿ ಸಹಾಯಕ (ಗ್ರೇಡ್–1) ವೃಂದದಿಂದ ಬಡ್ತಿ ಮೂಲಕ. | ಕಾನೂನಿನ್ವಯ ಸ್ಥಾಪಿಸಲಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಬ್ಯಾಚುಲರ್ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.<br><br>ಕಾನೂನಿನ್ವಯ ಸ್ಥಾಪಿಸಲಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಬ್ಯಾಚುಲರ್ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.<br><br>ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹಾಗೂ ಗ್ರಾಮೀಣ ಅಭಿವೃದ್ಧಿ ಸಹಾಯಕ (ಗ್ರೇಡ್–1) ವೃಂದದಲ್ಲಿ 5 ವರ್ಷಕ್ಕಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರಬೇಕು.<br><br>ಪರಂತು 5 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ನೌಕರರು ಲಭ್ಯವಿಲ್ಲದಿದ್ದ ಪಕ್ಷದಲ್ಲಿ 3 ವರ್ಷಕ್ಕಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ನೌಕರರನ್ನು ಪರಿಗಣಿಸಬಹುದು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸ್ವರ್ಣಲತ ಎಂ.ಭಂಡಾರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ